## ಪ್ರತಿಭಟನಾ ರ‍್ಯಾಲಿ

ಹಿಂದಿ ಶಿಕ್ಷಕರ ನೇಮಕ ಸಂಬಂಧ ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಪರಿಷತ್ತು (ಎನ್‌ಸಿಟಿಇ) ಜಾರಿಗೆ ತಂದಿರುವ ಹೊಸ ನಿಯಮ ವಿರೋಧಿಸಿ 'ನಿರುದ್ಯೋಗಿ ಹಿಂದಿ ಶಿಕ್ಷಕರ ಸಂಘ' ಶುಕ್ರವಾರ ಕೆಎಸ್‌ಆರ್ ರೈಲು ನಿಲ್ದಾಣದಿಂದ ಸ್ವಾತಂತ್ರ್ಯ ಉದ್ಯಾನವನದವರೆಗೆ ಪ್ರತಿಭಟನಾ ರ‍್ಯಾಲಿ ನಡೆಸಿತು.

## ಸುದ್ದಿ ಕಾರ್ನರ್

# ಪ್ಯಾಕೇಜ್ಡ್ ವಾಟರ್ ಪ್ಲಾಂಟ್‌ನಿಂದ ಐಎಸ್‌ಐ ಚಿಹ್ನೆ ದುರ್ಬಳಕೆ

ಬೆಂಗಳೂರು: ಅನಧಿಕೃತವಾಗಿ ಐಎಸ್‌ಐ ಚಿಹ್ನೆ ಬಳಕೆ ಮಾಡಿಕೊಂಡು ನೀರು ಸರಬರಾಜು ಮಾಡುತ್ತಿದ್ದ 2 ಪ್ಯಾಕೇಜ್ಡ್ ವಾಟರ್ ಪ್ಲಾಂಟ್‌ಗಳ ಮೇಲೆ ಭಾರತೀಯ ಮಾನಕ ಸಂಸ್ಥೆ ಬೆಂಗಳೂರು ಶಾಖೆಯ ಅಧಿಕಾರಿಗಳು ದಾಳಿ ನಡೆಸಿ ಅಪಾರ ಪ್ರಮಾಣದ ವಸ್ತುಗಳನ್ನು ವಶಕ್ಕೆ ಪಡೆದಿದ್ದಾರೆ. ಬೆಂಗಳೂರು ಉತ್ತರ ತಾಲೂಕಿನ ಜಾಲ ಹೋಬಳಿಯ ಮಾರನಾಯಕನ ಹಳ್ಳಿಯಲ್ಲಿರುವ ಡಾಲ್ಫಿನ್ ಆಕ್ವಾ ಹಾಗೂ ಫಾಸ್ಟರ್ಸ್ ಹೆಸರಿನಲ್ಲಿ ಖನಿಜಯುಕ್ತವಲ್ಲದ ಪ್ಯಾಕೇಜ್ಡ್ ನೀರನ್ನು ಉತ್ಪಾದನೆ ಮಾಡುತ್ತಿರುವ ಆನೇಕಲ್ ತಾಲೂಕಿನ ಜಿಗಣಿಯಲ್ಲಿರುವ ಬೂರೋ ಸಪ್ಲೈ ವಾಟರ್ ಪ್ಲಾಂಟ್ ಮೇಲೆ ಭಾರತೀಯ ಮಾನಕ ಸಂಸ್ಥೆಯ ಅಧಿಕಾರಿಗಳು ದಾಳಿ ಮಾಡಿದ್ದಾರೆ. ಈ ಘಟಕಗಳು ಐಎಸ್‌ಐ ಅಥವಾ ಬಿಐಎಸ್ ಪರವಾನಗಿ ಪ್ರಮಾಣಪತ್ರ ಪಡೆಯದೇ ಅನಧಿಕೃತವಾಗಿ ಐಎಸ್‌ಐ ಚಿಹ್ನೆಯನ್ನು ಬಳಸಿಕೊಂಡು ವ್ಯಾಪಾರ ಮಾಡುತ್ತಿದ್ದರು. ಭಾರತೀಯ ಮಾನಕ ಸಂಸ್ಥೆ ಕಾಯ್ದೆಯ ಪ್ರಕಾರ ಪ್ಯಾಕೇಜ್ಡ್ ವಾಟರ್ ಪ್ಲಾಂಟ್ ಮಾಲೀಕರ ವಿರುದ್ಧ ಕ್ರಮ ತೆಗೆದುಕೊಂಡಿದ್ದು, ಇವರಿಗೆ ಒಂದು ವರ್ಷ ಜೈಲು ಶಿಕ್ಷೆ, 50 ಸಾವಿರ ರೂ. ದಂಡ ಅಥವಾ ಎರಡನ್ನೂ ವಿಧಿಸುವ ಅಧಿಕಾರವನ್ನು ನ್ಯಾಯಾಲಯ ಹೊಂದಿದೆ. ಐಎಸ್‌ಐ ಚಿಹ್ನೆಯನ್ನು ಯಾವುದೇ ಸಂಸ್ಥೆ ಅನಧಿಕೃತವಾಗಿ ಬಳಕೆ ಮಾಡಿಕೊಳ್ಳುತ್ತಿದ್ದಲ್ಲಿ ಮಾಹಿತಿ ನೀಡುವಂತೆ ಭಾರತೀಯ ಮಾನಕ ಸಂಸ್ಥೆಯು ಮನವಿ ಮಾಡಿದೆ.

» ಭಾರತೀಯ ಮಾನಕ ಸಂಸ್ಥೆ ಅಧಿಕಾರಿಗಳಿಂದ ದಾಳಿ

» ಖನಿಜಯುಕ್ತವಲ್ಲದ ಪ್ಯಾಕೇಜ್ಡ್ ನೀರು ಉತ್ಪಾದನೆ

ಹ ದಳಕೆ ಗಹಣ!

Scanned by CamScanner